# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **33(61)** |
| **ಸದಸ್ಯರ ಹೆಸರು** | **:** | **ಶ್ರೀ ಗೋವಿಂದರಾಜು(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **08.12.2025** |
| **ಉತ್ತರಿಸುವ ಸಚಿವರು** | **:** | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಅತ್ಮ ಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶೈಕ್ಷಣಿಕ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುವುದೇ? | ಹೌದು |
| ಆ. | ಹಾಗಿದ್ದರೆ ಕಳೆದ 5 ವರ್ಷದಿಂದ ಇಲ್ಲಿಯ ವರೆಗೂ ಎಷ್ಟು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೆಚ್ಚ ವನ್ನು ಭರಿಸಲಾಗಿದೆ: ನೀಡಿದ್ದರೆ ಸರ್ಕಾರದಿಂದ ಎಷ್ಟು ಹಣವನ್ನು ಒದಗಿಸಿದೆ ಎಷ್ಟು ಬಾಕಿ ಇದೆ. | ಕಳೆದ ಐದು ವರ್ಷದಿಂದ (2020-21 ರಿಂದ 2024-25ನೇ ಸಾಲಿನಲ್ಲಿ ) ಒಟ್ಟು 336 ವಿದ್ಯಾರ್ಥಿಗಳಿಗೆ ಒಟ್ಟು ರೂ. 45,94,931/- (ನಲವತ್ತೈದು ಲಕ್ಷದ ತೊಂಭತ್ತು ನಾಲ್ಕು ಸಾವಿರದ ಒಂಭೈನೂರಾ ಮೂವತ್ತೊಂದು ರೂಪಾಯಿಗಳು ಮಾತ್ರ) ಶೈಕ್ಷಣಿಕ ವೆಚ್ಚವನ್ನು ಭರಿಸಲಾಗಿದೆ. ವರ್ಷಾವಾರು ಭರಿಸಲಾದ ವೆಚ್ಚದ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ ಸಂ | ಸರ್ಕಾರದ ಆದೇಶ ಸಂಖ್ಯೆ | ಶುಲ್ಕ ಮರುಪಾವತಿ ಮಾಡಿರುವ ವರ್ಷ | ಶುಲ್ಕ ಮರುಪಾವತಿ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | ಶುಲ್ಕ ಮರುಪಾವತಿ ಒಟ್ಟು ಮೊತ್ತ |
|---|---|---|---|---|
| 1 | ಸರ್ಕಾರದ ಆದೇಶ ಸಂಖ್ಯೆ: ಇಪಿ 48 ಯೋಯೋಕ 2023 ದಿನಾಂಕ:20.03.2023ರ | 2020-21 | 168 | 22,49,331/- |
| 2 | ಸರ್ಕಾರದ ಆದೇಶ ಸಂಖ್ಯೆ: ಇಪಿ 2 ಯೋಯೋಕ 2022 ದಿನಾಂಕ:03.02.2025ರ ಆದೇಶದನ್ವಯ | 2021-22 | 138 | 18,61,050/- |
| 3 | ಸರ್ಕಾರದ ಆದೇಶ ಸಂಖ್ಯೆ: ಇಪಿ 2 ಯೋಯೋಕ 2022 ದಿನಾಂಕ:03.02.2025ರ ಆದೇಶದನ್ವಯ | 2022-23 | 23 | 3,46,550/- |
| 4 | ಸರ್ಕಾರದ ಆದೇಶ ಸಂಖ್ಯೆ: ಇಪಿ 2 ಯೋಯೋಕ 2022 ದಿನಾಂಕ:03.02.2025ರ ಆದೇಶದನ್ವಯ | 2023-24 | 06 | 1,14,000/- |
| 5 | ಸರ್ಕಾರದ ಆದೇಶ ಸಂಖ್ಯೆ: ಇಪಿ 2 ಯೋಯೋಕ 2022 ದಿನಾಂಕ:03.02.2025ರ ಆದೇಶದನ್ವಯ | 2024-25 | 01 | 24,000/- |
| | ಒಟ್ಟು | | 336 | 45,94,931/- |

<table>
<tr>
<td></td>
<td></td>
<td>
<table>
<tr><th>ಕ್ರ ಸಂ</th><th>ಬಾಕಿ ಇರುವ ವರ್ಷ</th><th>ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>1</td><td>2020-2021</td><td>0</td></tr>
<tr><td>2</td><td>2021-2022</td><td>0</td></tr>
<tr><td>3</td><td>2022-2023</td><td>163</td></tr>
<tr><td>4</td><td>2023-2024</td><td>184</td></tr>
<tr><td>5</td><td>2024-2025</td><td>114</td></tr>
<tr><td></td><td>ಒಟ್ಟು</td><td>461</td></tr>
</table>
ಉಳಿದ 461 ವಿದ್ಯಾರ್ಥಿಗಳಿಗೆ ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಸಲ್ಲಿಸಬೇಕಿದ್ದು ಪಾವತಿ ಬಾಕಿ ಇರುತ್ತದೆ.
</td>
</tr>
<tr>
<td>ಇ.</td>
<td>ರಾಜ್ಯದಲ್ಲಿ ಶೈಕ್ಷಣಿಕ ವೆಚ್ಚದ ಪರಿಹಾರ ನೀಡುವ ಯೋಜನೆಯು ಯಾವ ವರ್ಷದಿಂದ ಪ್ರಾರಂಭಗೊಂಡಿದೆ: ಹಾಗೂ ಇದರ ಉದ್ದೇಶವೇನು:</td>
<td>ರಾಜ್ಯದಲ್ಲಿ ಶೈಕ್ಷಣಿಕ ವೆಚ್ಚದ ಪರಿಹಾರ ನೀಡುವ ಯೋಜನೆಯು 2016-17ನೇ ಸಾಲಿನಿಂದ ಪ್ರಾರಂಭಗೊಂಡಿದೆ.<br><br>ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮ ಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣವನ್ನು ಮುಂದುವರೆಸಲು ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕವನ್ನು ಶೈಕ್ಷಣಿಕ ವೆಚ್ಚದ ಪರಿಹಾರ ನೀಡುವುದು.</td>
</tr>
<tr>
<td>ಈ</td>
<td>ಕಳೆದ 8 ವರ್ಷದಿಂದ ಇಲ್ಲಿಯ ವರೆಗೂ ಶೈಕ್ಷಣಿಕ ವೆಚ್ಚಕ್ಕಾಗಿ ಎಷ್ಟು ಅರ್ಜಿಗಳು ಸ್ವೀಕೃತ ವಾಗಿದೆ: ಎಷ್ಟು ಅರ್ಜಿಗಳು ತಿರಸ್ಕಾರಗೊಂಡಿದೆ: ಹಾಗೂ ಅರ್ಹತೆ ಹೊಂದಲು ಇರುವ ಮಾನದಂಡವೇನು</td>
<td>ಕಳೆದ 8 (2017-18 ರಿಂದ 2024-25ನೇ ಸಾಲಿನವರೆಗೆ) ವರ್ಷದಿಂದ ಇಲ್ಲಿಯವರೆಗೆ ಶೈಕ್ಷಣಿಕ ವೆಚ್ಚಕ್ಕಾಗಿ ಒಟ್ಟು1589 ಅರ್ಜಿಗಳು ಸ್ವೀಕೃತವಾಗಿರುತ್ತವೆ.<br>ಈ ಪೈಕಿ 1128 ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.<br><br>ಉಳಿದ ಒಟ್ಟು 461 ಅರ್ಜಿಗಳಿಗೆ ಜಿಲ್ಲೆಗಳಿಂದ ಪ್ರಸ್ತಾವನೆ ಸ್ವೀಕರಿಸಬೇಕಿದ್ದು ಶುಲ್ಕ ಮರುಪಾವತಿ ಬಾಕಿ ಇರುತ್ತದೆ.<br><br>ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:<br>1. SATS ನಲ್ಲಿ ಪೋಷಕರ ಹೆಸರನ್ನು ಹೊಂದಿರುವ ದೃಢೀಕೃತ ಪ್ರತಿ<br>2.ಆಯಾ ವರ್ಷದ ಬೋಧನ ಶುಲ್ಕದ ರಶೀದಿ ಮತ್ತು ವಸತಿ ಶುಲ್ಕದ ರಶೀದಿಗಳ ದೃಢೀಕೃತ ಪ್ರತಿ<br>3. FIR ದೃಢೀಕೃತ ಪ್ರತಿ<br>4. ಮರಣ ಪ್ರಮಾಣ ಪತ್ರದ ದೃಢೀಕೃತ ಪ್ರತಿ<br>5. ರೈತರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ನಡವಳಿಯ ದೃಢೀಕೃತ ಪ್ರತಿ (<br>6. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರು ರೈತರ ಮರಣಾನಂತರ ಪರಿಹಾರ ನೀಡುವ ಸಂದರ್ಭದಲ್ಲಿ ಕುಟುಂಬಕ್ಕೆ ನೀಡಲಾಗಿರುವ ರೂ 500000/- ಪರಿಹಾರ ಮಂಜೂರಾತಿ ಪತ್ರದ ದೃಢೀಕೃತ ಪ್ರತಿ.</td>
</tr>
</table>

**ಇಪಿ 221 ಯೋಯೋಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**